ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. **080-22372738** E-mail: nregs-ka@nic.in

ಗ್ರಾಅಪ 276 ಉಖಾಯೋ 2017 ದಿನಾಂಕ: 29-06-2017

## ಸುತ್ತೋಲೆ

ವಿಷಯ: ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ವಿಧವೆಯರಿಗೆ, ಪತಿ ಪರಿತ್ಯಕ್ತರು ಮತ್ತು ನಿರಾಶ್ರಿತ ಮಹಿಳೆಯರಿಗೆ 100 ದಿನಗಳ ಖಾತರಿ ಉದ್ಯೋಗವನ್ನು ನೀಡುವುದರ ಕುರಿತು.

ಉಲ್ಲೇಖ:
1. ಮಹಾತ್ಮಗಾಂಧಿ ನರೇಗಾ ಯೋಜನೆಯ ಕಾರ್ಯಚರಣೆ ಮಾರ್ಗಸೂಚಿ-2013 4ನೇ ಆವೃತ್ತಿಯ ಕಂಡಿಕೆಯ ಸಂಖ್ಯೆ 9.6ರ ರೀತ್ಯಾ.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರ ಟಿಪ್ಪಣಿ ಪತ್ರದ ಗ್ರಾಪಂರಾಸ/ಟಿ/44/2016-17 ದಿನಾಂಕ: 12-04-2017

~~~~~~

ಮಹಾತ್ಮಗಾಂಧಿ ನರೇಗಾ ಅಧಿನಿಯಮದಡಿ ಮಹಿಳೆಯರಿಗೆ ಸೃಷ್ಟಿಸಲಾದ ಉದ್ಯೋಗವಕಾಶಗಳಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಉದ್ಯೋಗವನ್ನು ನೀಡುವಂತೆ ಸ್ಪಷ್ಟವಾಗಿ ತಿಳಿಸಿರುತ್ತದೆ. ಮಹಿಳೆಯರಲ್ಲಿ ವಿಧವೆಯರು ಪತಿ ಪರಿತ್ಯಕ್ತರು ಮತ್ತು ನಿರಾಶ್ರಿತ ಮಹಿಳೆಯರು ಇದ್ದು, ಅವರುಗಳನ್ನು ದುರ್ಬಲವರ್ಗದವರೆಂದು ಮತ್ತು ವಿಶೇಷ ವರ್ಗದವರೆಂದು ಪರಿಗಣಿಸಬೇಕೆಂದು ಯೋಜನೆಯ ಕಾರ್ಯಚರಣೆಯ ಮಾರ್ಗಸೂಚಿಗಳ ಕಂಡಿಕೆ ಸಂಖ್ಯೆ: 9.6.1ರಲ್ಲಿ ತಿಳಿಸಿರುತ್ತದೆ. ಇಂತಹ ಅಸಹಾಯಕ ಮಹಿಳೆಯರನ್ನು ಗ್ರಾಮ ಪಂಚಾಯತಿಗಳು ಗುರುತಿಸಿ 100 ದಿನಗಳ ಉದ್ಯೋಗವನ್ನು ನೀಡುವುದನ್ನು ಖಾತರಿ ಪಡಿಸಿಕೊಳ್ಳಲು ಕ್ರಮವಹಿಸುವುದು. ಇಂತಹ ಅಸಹಾಯಕ/ಅಶಕ್ತ ಮಹಿಳೆಯರನ್ನು ಒಂದು ಕುಟುಂಬವನ್ನಾಗಿ ಪರಿಗಣಿಸಿ ಉದ್ಯೋಗವನ್ನು ಪಡೆಯಲು ಒಂದು ಅದ್ವಿತೀಯ ಉದ್ಯೋಗ ಚೀಟಿಯನ್ನು ನೀಡಲು ಕ್ರಮವಹಿಸುವುದು. ವಿಶೇಷವಾಗಿ ವಿಶೇಷ ಸಂದರ್ಭಗಳಲ್ಲಿರುವ ಮಹಿಳೆಯರು ಅಂದರೆ ಗರ್ಭಿಣಿಯರು ಮತ್ತು ಬಾಣಂತಿಯವರಿಗೆ (ಪ್ರಸವಕ್ಕೆ ಮುನ್ನ ಕಡೆಯ ಪಕ್ಷ 8 ತಿಂಗಳವರೆಗೆ ಮತ್ತು ಪ್ರಸವದ ನಂತರ 10 ತಿಂಗಳುಗಳು ಕಳೆದ ಮೇಲೆ) ವಿಶೇಷ ಕೆಲಸಗಳಾದ ಕಠಿಣ ಶ್ರಮ ರಹಿತ ಕೆಲಸ ಮತ್ತು ಅವರು ವಾಸಿಸುವ ಮನೆಗೆ ಸಮೀಪದಲ್ಲಿರುವಂತೆಯೇ, ಕೆಲಸಗಳನ್ನು ಗುರುತಿಸಿ ಕೆಲಸವನ್ನು ನೀಡುವುದು.

ಮೇಲಿನಂತೆ ಸೂಚನೆಗಳನ್ನು ನರೇಗಾ ಯೋಜನೆಯ ಅನುಷ್ಠಾನದಲ್ಲಿ ಪಾಲಿಸುವುದು.

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ
1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
~~~~~~

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು ವಿಧಾನ ಸೌಧ, ಬೆಂಗಳೂರು
2. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯನಾಗರಿಕರ ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು
5. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಜಂಟಿ ನಿರ್ದೇಶಕರು ತೋಟಗಾರಿಕೆ/ತಾಂತ್ರಿಕ/ಆಡಳಿತ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ರಾಜ್ಯದ ಎಲ್ಲಾ ಜಿಲ್ಲೆಗಳ ಒಂಬುಡ್ಸ್‌ಮನ್‌ಗಳಿಗೆ
8. ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ), ವಿಧಾನ ಸೌಧ, ಬೆಂಗಳೂರು.
9. ವಿಶೇಷಾಧಿಕಾರಿ, ಗಣಕಕೋಶ, ಗ್ರಾಅಪ ಇಲಾಖೆ. ಇವರು ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಲು ಕೋರಿದೆ.
10. ಸಂಪಾದಕರು ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರು ಇದನ್ನು ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.
11. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
12. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ
13. ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು.